ಕಥೆ

# ಎಣ್ಣೆ ಮರ

■ ಕೃತಿಕ ಟಿ.
ಕಲೆ: ಈಶ್ವರ ಬಡಿಗೇರ್



ಅಂದು ಶುಕ್ರವಾರ ಸಂಜೆ, ಎಲ್ಲರೂ ವಾರ ಪೂರ್ತಿ ದುಡಿದು ದಣಿದು ವೀಕೆಂಡ್ ವಿಶ್ರಾಂತಿಗಾಗಿ ಕಾಯುವ ದಿನ, ಬಹುತೇಕ ಮಂದಿ ಎರಡು ದಿನ ರಜೆ ಇದೆ ಬೆಂಗಳೂರಿಗೆ ಹತ್ತಿರ ಇರುವ ಯಾವುದಾದರು ಸಣ್ಣ ಟ್ರಿಪ್ ಹೋಗಿ ಬರೋಣ ಎಂದು ವಾರದ ಮೊದಲನೆ ದಿನವೇ ಪ್ಲ್ಯಾನ್ ಮಾಡಿರುತ್ತಾರೆ ಆದರೆ ಎಲ್ಲರಿಗೂ ಸೋಮವಾರ ಇರುವ ಹುಮ್ಮಸ್ಸು ಶುಕ್ರವಾರ ಇರುವುದಿಲ್ಲ, ಕೆಲವರಿಗೆ ಹಣಕಾಸಿನ ಸಮಸ್ಯೆ ಆದರೆ ಅದನ್ನು ಹೇಳಿಕೊಳ್ಳಲಾಗದೆ “ಅಯ್ಯಾ ಯಾವ್ ಟ್ರಿಪ್ಪು ಬೇಡ, ಏನು ಬೇಡ ಸಿಗೋದು ಎರಡು ದಿನ ಆರಾಮಾಗಿ ಮನೇಲಿ ರೆಸ್ಟ್ ಮಾಡೋಣ, ಅಯ್ಯೋ ನಾನು ನೋಡಿರೊ ಪ್ಲೇಸ್, ಬೇರೆದಾದ್ರೆ ಬರ್ತೀನಿ” ಎಂದು ಎಲ್ಲಾ ನೆಪ ಹೇಳಿ ಜಾರಿಕೊಳ್ಳುತ್ತಾರೆ. ಆದರೆ ಇಲ್ಲಿ ಇನ್ನೂ ಮದುವೆಯಾಗದ ಬ್ಯಾಚುಲರ್ಸ್ ಗ್ಯಾಂಗೊಂದು ಲೇಟ್ ನೈಟ್ ಪಾರ್ಟಿಯಲ್ಲಿ ಫುಲ್ ಟೈಟಾಗಿ ಮನೆಗೆ ಹೋಗೋದೆ ಬೇಡ ಎಂದು ಅವರ ಮೊದಲೇನೇ ಪ್ಲ್ಯಾನ್.

ವಿಶ್ವ ಶುಕ್ರವಾರ ಕೆಲಸ ಮುಗಿಸಿ ಅವನ ಎಣ್ಣೆ ಗ್ಯಾಂಗಲ್ಲೊಬ್ಬನಾದ ರಾಜೇಶನಿಗೆ ಕರೆ ಮಾಡಿ

‘ಮಗ, ಎಷ್ಟು ಜನ ಬರ್ತಾರೆ?’

‘ಐದೂ ಜನ ಕಣೊ’

‘ಸರಿ ಹಾಗಾದ್ರೆ ನನ್ಗೆ ಎಲ್ಲಾ ಜಿಪೆ ಮಾಡ್ಬಿಡಿ ನಾನು ಹಂಗೆ ತಗೊಂಡು ಬರ್ತೀನಿ’

‘ಮಗ ತಗೊಂಡು ಬಾರೊ ಆಮೇಲೆ ಕೊಡ್ತೀವಿ’

‘ಲೇ ಮಂತ್ ಎಂಡ್, ನಯಾ ಪೈಸಾ ಇಲ್ಲ, ದುಡ್ಡು ಹಾಕುದ್ರೆ ಎಣ್ಣೆ, ಇಲ್ಲ ಅಂದ್ರೆ ಇಲ್ಲ ಅಷ್ಟೆ’

‘ಸರಿ ಎಲ್ಲಾರ್ಗು ಗ್ರೂಪ್ ಅಲ್ಲಿ ಮೆಸೇಜ್ ಹಾಕ್ತೀನಿ, ತಗೊಂಡು ಬಾ’

‘ಸರಿ’ ಎಂದು ವಿಶ್ವ ಕಾಲ್ ಕಟ್ ಮಾಡಿ ತನ್ನ ದ್ವಿಚಕ್ರ ವಾಹನದಲ್ಲಿ ಒಂದು ಬಾರ್ ಹತ್ತಿರ ಬಂದು ಕೆಳಗಿಳಿದು ಫೋನ್ ನೋಡುತ್ತಾನೆ, **your a/c is credited with Rs** ಎಂದು ಮೂರು ಸಂದೇಶಗಳು ಬಂದಿರುತ್ತದೆ. ಯಾರ್ಯಾರು ದುಡ್ಡು ಕಳಿಸಿದ್ದಾರೆಂದು ವಿಶ್ವ ಪರಿಶೀಲಿಸಿ ಮತ್ತೆ ರಾಜೇಶನಿಗೆ ಕರೆ ಮಾಡಿ

‘ಲೋ ಮಗ ಸೂರಿ ಹಾಕಿಲ್ಲ ಕಣೊ ನಾನು ಬರೀ ನಾಲ್ಕು ಜನಕ್ಕೆ ತರ್ತೀನಿ ಆಮೇಲೆ ನಿಮ್ ಇಷ್ಟ’ ಎಂದ.

ಅದಕ್ಕೆ ಪ್ರತ್ಯುತ್ತರವಾಗಿ ರಾಜೇಶ ‘ಲೇ ಸಾಯ್ಬೇಡ ಇರು ನಾನೇ ಕಳಿಸ್ತೀನಿ’ ಎಂದು ರಾಜೇಶ ಕಾಲ್ ಕಟ್ ಮಾಡುತ್ತಾನೆ. ಮರುನಿಮಿಷವೇ ವಿಶ್ವನಿಗೆ **your a/c is credited with Rs** ಎಂದು ಮತ್ತೊಂದು ಸಂದೇಶ ಬರುತ್ತದೆ. ದುಡ್ಡು ಬಂದಿದೆ ಎಂದು ಖಚಿತಪಡಿಸಿಕೊಂಡು ವಿಶ್ವ ನೇರ ಬಾರಿನೊಳಗೆ ಹೋಗಿ ಮದ್ಯ, ಸಿಗರೇಟು ಕೊಂಡುಕೊಂಡು ಬಂದು